

# ಕಾಡುಬಳ್ಳಿ ಕಡುಸೀಗೆ

**ಸದಾ ಹಚ್ಚ ಹಸುರಿನಿಂದ ಕೂಡಿರುವ ಕಡುಸೀಗೆ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿರುವ ಬಳ್ಳಿ. ‘ಬ್ಲೂ ಟೈಗರ್’ ಎಂಬ ಚಿಟ್ಟೆಗಳ ಸಂತಾನಕ್ಕೂ ಅನ್ನದಾತ.**

■ ಎಲ್‌.ಸಿ. ಚನ್ನರಾಜು

ಏಪ್ರಿಲ್ ತಿಂಗಳ ಕಡುಬೇಸಿಗೆ. ಎರಡು ವರ್ಷಗಳಿಂದ ಋತುಮಾನಕ್ಕೆ ಅನುಗುಣವಾಗಿ ಬರಬೇಕಿದ್ದ ಮಳೆ ಬಾರದೆ ಮೈಸೂರಿನ ಹೆಗ್ಗಡದೇವನಕೋಟೆಯ ವನಸಿರಿಗೆ ಮಸುಕು ಕವಿದಿತ್ತು. ಹೆಗ್ಗಡದೇವನಕೋಟೆಯಿಂದ ನಾಗರಹೊಳೆಗೆ ಹೋಗುವ ಹಾದಿಯಲ್ಲಿ ಮಹಿಳೆಯೊಬ್ಬರು ಬೇಲಿಯ ಮೇಲೆ ಹಬ್ಬಿ ಬೆಳೆದಿದ್ದ ಕಡುಸೀಗೆ ಬಳ್ಳಿಯಿಂದ ಎಲೆಗಳನ್ನು ಬಿಡಿಸಿ ಸೀರೆಯ ಮಡಿಲಿಗೆ ಸೇರಿಸುತ್ತಿದ್ದರು. ಆ ಸುಡು ಬೇಸಿಗೆಯಲ್ಲೂ ಕಡುಸೀಗೆ ಬಳ್ಳಿ ಹಚ್ಚ ಹಸುರಾಗಿತ್ತು.

ಕನ್ನಡದಲ್ಲಿ ಕಡುಸೀಗೆ, ಹಾಲೆ ಸೊಪ್ಪು, ದುಗ್ಗೀರೆ ಸೊಪ್ಪು, ಕಡು ಹಾಲೆಬಳ್ಳಿ ಎಂಬ ಹೆಸರು ಇದಕ್ಕಿದೆ. ಅಸ್ಲೆಪ್ಲಿ ಡಿಯೋಸಿ (Ascelpi diaceae) ಸಸ್ಯಕುಟುಂಬಕ್ಕೆ ಸೇರಿದ ಇದರ ಇಂಗ್ಲಿಷ್ ಹೆಸರು ‘ಗ್ರೀನ್ ಮಿಲ್ಕ್ ವೀಡ್ ಕ್ಲೈಂಬರ್’ (Green Milk Weed climber). ಸಸ್ಯಶಾಸ್ತ್ರೀಯ ಹೆಸರು ವಟ್ಟಕಾಕ ವೋಲುಬಿಲೀಸ್ (wattakaka volubilies).

ಸದಾ ಹಚ್ಚ ಹಸುರಿನಿಂದ ಕೂಡಿರುವ ಈ ಬಳ್ಳಿ ಬಹುವಾರ್ಷಿಕವಾಗಿದ್ದು, ಉಷ್ಣವಲಯದ ತೇವಾಂಶವುಳ್ಳ ಉದುರೆಲೆ ಕಾಡುಮೇಡುಗಳಲ್ಲಿ ಕಂಡುಬರುತ್ತದೆ.

ಗಟ್ಟಿಮುಟ್ಟಾದ ಈ ಕಡುಸೀಗೆ ಬಳ್ಳಿ 10ರಿಂದ 15 ಮೀಟರ್ ಉದ್ದ ಬೆಳೆಯುತ್ತದೆ. ಇದರ ಹೂಗಳು ಹಚ್ಚ ಹಸುರಾಗಿದ್ದು ಕೊಡೆಯಂತೆ ಗೊಂಚಲು ರೂಪದಲ್ಲಿ ಗುಂಡಾಗಿರುತ್ತವೆ. ಕಾಯಿಗಳು ಒಂದಕ್ಕೊಂದು ಅಂಟಿಕೊಂಡು ಜೋಡಿಯಾಗಿದ್ದು, ಏಪ್ರಿಲ್–ಮೇ ತಿಂಗಳಲ್ಲಿ ಕಾಯಿಗಳು ಎರಡು ಹೋಳಾಗಿ ಸಿಡಿದು ಹತ್ತಿ ಹೊದಿಕೆಯ ಬೀಜಗಳು ಪ್ಯಾರಾಚೂಟ್‌ಗಳಂತೆ ಗಾಳಿಯಲ್ಲಿ ತೇಲಾಡಿಕೊಂಡು ಭೂಮಿಗೆ ಇಳಿದು ಮಣ್ಣು ಸೇರಿ ಮುಂಗಾರಿನ ಮಳೆಗಳಿಗೆ ಮೊಳೆಯುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಈ ಬಳ್ಳಿಯನ್ನು ‘ಮೀಸೆ ಕಾಯಿ’ ಎಂತಲೂ ಕರೆಯುತ್ತಾರೆ. ಇದರಲ್ಲಿ ಕರಿ ಕಡುಸೀಗೆ, ಬಿಳಿ ಕಡುಸೀಗೆ ಎಂಬ ಎರಡು ತಳಿಗಳಿವೆ. ಬ್ಲೂ ಟೈಗರ್ ಎಂಬ ಚಿಟ್ಟೆಗಳ ಸಂತಾನಕ್ಕೆ ಈ ಬಳ್ಳಿಯೇ ಅನ್ನದಾತ.



ಹೆಗ್ಗಡದೇವನಕೋಟೆಯ ಗ್ರಾಮೀಣ ಮಹಿಳೆಯರ ಅಚ್ಚುಮೆಚ್ಚಿನ ಬಳ್ಳಿ ಈ ಕಡುಸೀಗೆ. ಆಡು, ಕುರಿಗಳನ್ನು ಮೇಯಿಸಲು ಕಾಡುಮೇಡು ಹೊಲ ಗದ್ದೆಗಳಿಗೆ ಹೋದಾಗ ಗಾಳಿಯಲ್ಲಿ ತೂರಿ ಬಂದು ಮೊಳೆತು ಸಸಿಯಾಗಿರುವ ಗಿಡಗಳನ್ನು ತಂದು ತಮ್ಮ ಹಿತ್ತಲುಗಳ ಬೇಲಿ ಮತ್ತು ಮರ ಗಿಡಗಳಿಗೆ ಹಬ್ಬಿಸಿ ಬೆಳೆಸುತ್ತಾರೆ. ಎಲೆ, ಹೂ ಮತ್ತು ಕಾಯಿಗಳ ಸಿಪ್ಪೆಯನ್ನು ತರಕಾರಿಯಾಗಿ ಗ್ರಾಮೀಣರು ಬಳಸುತ್ತಾರೆ. ಹುರುಳಿಕಾಳಿನ ಜೊತೆ ಬಸ್ಸಾರು ಮತ್ತು ಇತರೆ ಬೆರಕೆ ಸೊಪ್ಪುಗಳ ಜೊತೆ ಹುಳಿ ಸಾರು ಹಾಗೂ ಉಪ್ಸಾರು ಮಾಡುತ್ತಾರೆ.

### ಔಷಧೀಯ ಗುಣಗಳು

ಈ ಸೊಪ್ಪನ್ನು ಬಳಸಿದ ಸಾರಿನ ಸೇವನೆಯಿಂದ ವಾಯು ಮತ್ತು ಮೈ ಕೈ ಹಿಡಿದುಕೊಳ್ಳುವುದು ಗುಣವಾಗುತ್ತದೆ ಎಂಬುದು ನಾಗರಹೊಳೆ ಪ್ರದೇಶದ ಆದಿವಾಸಿಗಳ ಮತ್ತು ಗ್ರಾಮೀಣ ಮಹಿಳೆಯರ ಅನುಭವ. ಈ ಕಡುಸೀಗೆ ಸೊಪ್ಪು ಮತ್ತು ಬೇರಿಗೆ ಚರ್ಮ ರೋಗ, ಕೆಮ್ಮು, ಜ್ವರ, ಅತಿ ಶೀತ, ಸಕ್ಕರೆ ಕಾಯಿಲೆ ನಿಯಂತ್ರಣ, ಬೆನ್ನು ನೋವು ಮತ್ತು ರಕ್ತ ಶುದ್ಧಿ ಮಾಡುವ ಗುಣಗಳಿವೆ ಎಂಬುದು ಅವರ ನಂಬಿಕೆ.

ಏಪ್ರಿಲ್–ಮೇ ತಿಂಗಳುಗಳಲ್ಲಿ ಚೆನ್ನಾಗಿ ಬಲಿತಿರುವ ಬಳ್ಳಿಯ ಗೇಣುದ್ದದ ಬಳ್ಳಿಗಳನ್ನು ನರ್ಸರಿ ಚೀಲಗಳಲ್ಲಿ ನೆಟ್ಟು ಚೆನ್ನಾಗಿ ಚಿಗುರಿದ ನಂತರ ಬೇಲಿ ಮತ್ತು ಗಿಡ ಮರಗಳ ಮೇಲೆ ಅಥವಾ ಚಪ್ಪರ ಮಾಡಿ ಹಬ್ಬಿಸಿ ಬೆಳೆಸಬಹುದು. ಜೊತೆಗೆ ಜನವರಿ–ಫೆಬ್ರುವರಿ ಮಾರ್ಚ್ ತಿಂಗಳುಗಳಲ್ಲಿ ಕಾಯಿಗಳಿಂದ ಸಿಡಿಯುವ ಬೀಜಗಳನ್ನು ಸಂಗ್ರಹಿಸಿ ಬಿತ್ತನೆ ಮಾಡಿ ಕೂಡ ಕಡುಸೀಗೆ ಬಳ್ಳಿ ಬೆಳೆಸಲು ಸಾಧ್ಯವಿದೆ. ■